ದಿನಾಂಕ 5-4-2017 ರಂದು ಬೆಳಿಗ್ಗೆ 10.30 ಗಂಟೆಗೆ ಕೊಠಡಿ ಸಂ. 252. ಬಹುಮಹಡಿ ಕಟ್ಟಡ, ಬೆಂಗಳೂರಿನಲ್ಲಿ ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೊಂಭತ್ತನೇಯ ಸಭೆಯ ನಡುವಳಿಗಳು:

ಉಪಸ್ಥಿತರಿದ್ದ ಸದಸ್ಯರು:

| | | |
|---|---|---|
| 1. | ಡಾ. ಪಿ.ಎಂ. ಸಾಲಿಮಠ | ಅಧ್ಯಕ್ಷರು |
| 2. | ಶ್ರೀ ಎಂ. ಮಹೇಶ್ವರ ರಾವ್ | ಸದಸ್ಯರು |
| 3. | ಡಾ. ಎಂ. ಶೇಖರಗೌಡ | ಸದಸ್ಯರು |
| 4. | ಶ್ರೀಮತಿ ಹೇಮಾವತಿ ಲಂಕೇಶ | ಸದಸ್ಯರು |
| 5. | ಶ್ರೀ ಅಮರೇಶ ಬಲ್ಲಿದವ | ಸದಸ್ಯರು |
| 6. | ಶ್ರೀ ಸಿದ್ದಪ್ಪ ಭಂಡಾರಿ | ಸದಸ್ಯರು |
| 7. | ಶ್ರೀ ವೀರನಗೌಡ ಪರಸರೆಡ್ಡಿ | ಸದಸ್ಯರು |
| 8. | ಶ್ರೀ ಕೆ. ಮುರಳೀಧರ | ಸದಸ್ಯರು |
| 9. | ಡಾ. ಡಿ.ಎಂ. ಚಂದರಗಿ | ಸದಸ್ಯ–ಕಾರ್ಯದರ್ಶಿ |

ಪ್ರಾರಂಭದಲ್ಲಿ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೆಂಟನೇಯ ಸಭೆಗೆ ಸರ್ವಸದಸ್ಯರನ್ನು ಹಾಗೂ ಹೊಸದಾಗಿ ನಾಮನಿರ್ದೇಶನಗೊಂಡ ಸದಸ್ಯರಾದ ಶ್ರೀ ಅಮರೇಶ ಬಲ್ಲಿದವ, ಶ್ರೀ ಸಿದ್ದಪ್ಪ ಭಂಡಾರಿ ಮತ್ತು ಶ್ರೀ ವೀರನಗೌಡ ಪರಸರೆಡ್ಡಿ ಅವರುಗಳನ್ನು ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರವರು ಸ್ವಾಗತ ಕೋರಿದರು. ತದನಂತರ, ಕಾರ್ಯಸೂಚಿಯ ಪ್ರಕಾರ ಚರ್ಚಿಸಿ, ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

| | |
|---|---|
| ಐಟಂ–1 | **ದಿನಾಂಕ 3–10–2016 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೆಂಟನೇಯ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು**<br><br>**ಠರಾವು:**<br>ದಿನಾಂಕ 3–10–2016 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೆಂಟನೇಯ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು ನಡುವಳಿಗಳನ್ನು ಓದಲಾಯಿತೆಂದು ಪರಿಗಣಿಸಿ, ಸ್ಥಿರೀಕರಿಸಲಾಯಿತು **(ಕ್ರಮ: ಕುಲಸಚಿವರು)** |
| ಐಟಂ–2 | **ದಿನಾಂಕ 3–10–2016 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೆಂಟನೇಯ ಸಭೆಯ ನಡುವಳಿಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಅನುಮೋದನೆ ನೀಡುವುದು**<br><br>**ಠರಾವು:**<br>ದಿನಾಂಕ 3–10–2016 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೆಂಟನೇಯ ಸಭೆಯ ನಡುವಳಿಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಅನುಮೋದನೆ ನೀಡಿತು.<br>ಮುಂದುವರೆದು, ಅನುಕ್ರಮ ಸಂ. 13 ರ ಪ್ರಕಾರ ಆಸ್ಪತ್ರೆಗಳಿಗೆ ಅಂಗೀಕಾರ ನೀಡುವುದಕ್ಕೆ ಸಂಬಂಧಿಸಿದಂತೆ ಚರ್ಚಿಸಲಾಯಿತು ಹಾಗೂ ಡಿ.ಪಿ.ಎ.ಆರ್.ನ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು ಜಿಲ್ಲೆಯಲ್ಲಿ ಲಭ್ಯವಿರುವ ಒಬ್ಬ ವಿಶೇಷ ಪರಿಣಿತರನ್ನೊಳಗೊಂಡ ವಿಶ್ವವಿದ್ಯಾಲಯ ಮಟ್ಟದ ಸಮಿತಿಯನ್ನು ರಚಿಸಲು ಸಲಹೆ ನೀಡಲಾಯಿತು. **(ಕ್ರಮ: ಕುಲಸಚಿವರು/ಡೀನ್(ವಿದ್ಯಾರ್ಥಿ ಕಲ್ಯಾಣ))** |
| ಐಟಂ–3 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಏಳನೇಯ ಘಟಿಕೋತ್ಸವಕ್ಕೆ ಅತಿಥಿಗಳನ್ನು ನಿಗದಿಪಡಿಸುವ ಕುರಿತು.**<br><br>**ಠರಾವು:**<br>ದೀರ್ಘ ಚರ್ಚೆಯ ನಂತರ, ಪ್ರಸ್ತಾಪಿಸಿದ ಗಣ್ಯರ ಯಾದಿಗೆ ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡುತ್ತಾ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಏಳನೇಯ ಘಟಿಕೋತ್ಸವಕ್ಕೆ ಅತಿಥಿಗಳಾಗಿ |

| | |
|---|---|
| | ಆಹ್ವಾನಿಸಲು ನೀಡಿತು. (ಕ್ರಮ: ಕುಲಸಚಿವರು) |
| ಐಟಂ–4 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಏಳನೇಯ ಘಟಿಕೋತ್ಸವದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಸ್ನಾತಕ ಪದವಿಗಳ ಪ್ರದಾನ ಕುರಿತು**<br><br>**ಠರಾವು:**<br>ಚರ್ಚೆಯ ನಂತರ, ಅರ್ಹ ಅಭ್ಯರ್ಥಿಗಳಿಗೆ ಸ್ನಾತಕ ಪದವಿಗಳನ್ನು ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಏಳನೇಯ ಘಟಿಕೋತ್ಸವದಲ್ಲಿ ಪ್ರದಾನ ಮಾಡಲು ಘನ ವೇದಿಕೆಯು ಅನುಮೋದನೆ ನೀಡಿತು. (ಕ್ರಮ: ಕುಲಸಚಿವರು) |
| ಐಟಂ–5 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಏಳನೇಯ ಘಟಿಕೋತ್ಸವದಲ್ಲಿ ಅರ್ಹ ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿಗಳ ಪ್ರದಾನ ಕುರಿತು**<br><br>**ಠರಾವು:**<br>ಚರ್ಚೆಯ ನಂತರ, ಅರ್ಹ ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿಗಳನ್ನು ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಏಳನೇಯ ಘಟಿಕೋತ್ಸವದಲ್ಲಿ ಪ್ರದಾನ ಮಾಡಲು ಘನ ವೇದಿಕೆಯು ಅನುಮೋದನೆ ನೀಡಿತು (ಕ್ರಮ: ಕುಲಸಚಿವರು) |
| ಐಟಂ–6 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಏಳನೇಯ ಘಟಿಕೋತ್ಸವದಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ಬಂಗಾರದ ಪದಕ ಮತ್ತು ನಗದು ಬಹುಮಾನ/ಬಹುಮಾನಗಳನ್ನು ನೀಡುವ ಕುರಿತು**<br><br>**ಠರಾವು:**<br>ಚರ್ಚೆಯ ನಂತರ, ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ 14 ಕೃವಿವಿ ಬಂಗಾರದ ಪದಕಗಳು ಮತ್ತು 01 ದಾನಿಗಳ ಬಂಗಾರದ ಪದಕಗಳು, ಸ್ನಾತಕ ವಿದ್ಯಾರ್ಥಿಗಳಿಗಾಗಿ 4 ಕೃವಿವಿ ಬಂಗಾರದ ಪದಕಗಳು, 14 ದಾನಿಗಳ ಬಂಗಾರದ ಪದಕಗಳು ಹಾಗೂ 2 ನಗದು ಬಹುಮಾನ/ ಬಹುಮಾನಗಳನ್ನು ವಿಶ್ವವಿದ್ಯಾಲಯದ ವಿವಿಧ ಮಹಾವಿದ್ಯಾಲಯಗಳಲ್ಲಿಯ ಅರ್ಹ ಅಭ್ಯರ್ಥಿಗಳಿಗೆ ನೀಡಲು ಘನ ವೇದಿಕೆಯು ಅನುಮೋದನೆ ನೀಡಿತು.<br>ಮುಂದುವರೆದು, ಹೊಸದಾಗಿ ನಗದು ಬಹುಮಾನ / ಬಹುಮಾನಗಳನ್ನು ಸ್ಥಾಪಿಸುವುದಕ್ಕಿಂತ ವಿದ್ಯಾರ್ಥಿಗಳಿಗೆ ಆರ್ಥಿಕ ಸೌಲಭ್ಯಗಳನ್ನು ಒದಗಿಸುವ ಅವಕಾಶಗಳ ಬಗ್ಗೆ ಗಮನವಹಿಸಲು ಸಲಹೆ ನೀಡಲಾಯಿತು. (ಕ್ರಮ: ಶಿಕ್ಷಣ ನಿರ್ದೇಶಕರು / ಕುಲಸಚಿವರು) |
| ಐಟಂ–7 | **ಗ್ಲೋಬಲ್ ವಾಟರ್ ಮೀಟ್ ಹಾಗೂ ನ್ಯಾಶ್ನಲ್ ಸೈನ್ಸ್ ಕಾಂಗ್ರೆಸ್ ಕಾರ್ಯಕ್ರಮಗಳ ಆಯೋಜನೆಗಾಗಿ ಧನಸಹಾಯ ಹಾಗೂ ನಾಸ್ (ಎನ್.ಎ.ಎ.ಎಸ್.) ಸದಸ್ಯತ್ವ ಶುಲ್ಕವನ್ನು ನೀಡಲು ಅನುಮೋದನೆ ನೀಡುವ ಕುರಿತು.**<br><br>**ಠರಾವು:**<br>ದೀರ್ಘ ಚರ್ಚೆಯ ನಂತರ, ಕೃವಿವಿ ಧಾರವಾಡದಲ್ಲಿ ಗ್ಲೋಬಲ್ ವಾಟರ್ ಮೀಟ್ –2016 ಹಾಗೂ ಕೃವಿವಿ ಬೆಂಗಳೂರಿನಲ್ಲಿ ನ್ಯಾಶ್ನಲ್ ಸೈನ್ಸ್ ಕಾಂಗ್ರೆಸ್ ಕಾರ್ಯಕ್ರಮ ಆಯೋಜಿಸಲು ಅನುಕ್ರಮವಾಗಿ ರೂ. 5.00 ಲಕ್ಷಗಳ ಹಾಗೂ ರೂ. 10.00 ಲಕ್ಷಗಳ ಧನಸಹಾಯ ಪಾವತಿಸಿದಕ್ಕೆ ಹಾಗೂ ರೂ. 10.00 ಲಕ್ಷಗಳ ನಾಸ್ (ಎನ್.ಎ.ಎ.ಎಸ್.) ಸದಸ್ಯತ್ವ ಶುಲ್ಕವನ್ನು ಸಹ ಪಾವತಿಸಿ ಕೈಗೊಂಡ ಕ್ರಮವನ್ನು ಅನುಮೋದಿಸಿ ಸ್ಥಿರೀಕರಿಸಿತು. (ಕ್ರಮ: ಕುಲಸಚಿವರು) |
| ಐಟಂ–8 | **ಕಲಬುರ್ಗಿಯ ಕೃಷಿ ಸಂಶೋಧನಾ ಕೇಂದ್ರಕ್ಕಾಗಿ ಸ್ವಾಧೀನಪಡಿಸಿಕೊಂಡ ಭೂಮಿಯ ಪರಿಹಾರ ನೀಡಲು ಹಾಗೂ ಸಿವಿಲ್ ನ್ಯಾಯಾಲಯ ಕಲಬುರ್ಗಿಯಲ್ಲಿ ಪರಿಹಾರ ಹಣವನ್ನು ಜಮಾ ಮಾಡಲು ಕೈಗೊಂಡ ಕ್ರಮವನ್ನು ಸ್ಥಿರೀಕರಿಸಿ ಅನುಮೋದನೆ ನೀಡುವ ಕುರಿತು** |

ಠರಾವು:

ವಿಸ್ತೃತ ಚರ್ಚೆಯ ನಂತರ, ಕಲಬುರ್ಗಿಯ ಕೃಷಿ ಸಂಶೋಧನಾ ಕೇಂದ್ರಕ್ಕಾಗಿ ಸ್ವಾಧೀನಪಡಿಸಿಕೊಂಡ ಭೂಮಿಯ ಪರಿಹಾರ ನೀಡಲು ಸಿವಿಲ್ ನ್ಯಾಯಾಲಯ ಕಲಬುರ್ಗಿಯಲ್ಲಿ ಪರಿಹಾರ ಹಣ ರೂ. 3,83,57,439/– ಗಳನ್ನು ಜಮಾ ಮಾಡಿರುವುದಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. (ಕ್ರಮ: ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿಗಳು)

**ಐಟಂ–9** **ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರಿಗೆ ನೀಡಲಾಗುವ ತುಟ್ಟಿ ಭತ್ಯೆ, ದಿನಭತ್ಯೆ ಹಾಗೂ ಆಸನ ಶುಲ್ಕವನ್ನು ಹೆಚ್ಚಿಸುವ –ಕುರಿತು.**

ಠರಾವು:

ವಿವರವಾದ ಚರ್ಚೆಯ ನಂತರ, ವ್ಯವಸ್ಥಾಪನಾ ಮಂಡಳಿಯ ಅಧಿಕಾರೇತರ ಸದಸ್ಯರುಗಳಿಗೆ ನೀಡಲಾಗುವ ತುಟ್ಟಿ ಭತ್ಯೆ, ದಿನಭತ್ಯೆ ಹಾಗೂ ಆಸನ ಶುಲ್ಕವನ್ನು ಹೆಚ್ಚಿಸಿ ಯು.ಜಿ.ಸಿ. ನಿಯಮಾವಳಿಗಳನುಸಾರ ನೀಡುವಂತೆ ಪ್ರಸ್ತಾವನೆಯನ್ನು ಸರಕಾರಕ್ಕೆ ಸಲ್ಲಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸಲಹೆ ನೀಡಿತು. (ಕ್ರಮ: ಕುಲಸಚಿವರು)

**ಐಟಂ–10** **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸಿಬ್ಬಂದಿಯವರು ರೂ. 25,000/– ಕ್ಕಿಂತ ಹೆಚ್ಚಿನ ಮೊತ್ತದ ವೈದ್ಯಕೀಯ ವೆಚ್ಚದ ಮರುಪಾವತಿಯ ಬಿಲ್ಲುಗಳಿಗೆ ಅನುಮೋದನೆ ನೀಡುವ ಕುರಿತು.**

ಠರಾವು:

ಚರ್ಚೆಯ ನಂತರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ರಾಯಚೂರು ಅವರು ಪರಿಶೀಲಿಸಿ ಮೇಲುರುಜು ಮಾಡಿದಂತೆ ವೈದ್ಯಕೀಯ ವೆಚ್ಚದ ಮರುಪಾವತಿಗಾಗಿ ಘನ ವೇದಿಕೆಯು ಈ ಕೆಳಗಿನಂತೆ ಅನುಮೋದನೆ ನೀಡಿತು

| ಕ್ರ. ಸಂ. | ಸಿಬ್ಬಂದಿಯವರ ವಿವರ | ವೈದ್ಯಕೀಯ ವೆಚ್ಚ ಮರು – ಪಾವತಿಸಬೇಕಾದ ಮೊತ್ತ (ರೂ.) |
|---|---|---|
| 1 | ಡಾ: ಎಸ್. ಜಿ. ಹಂಚಿನಾಳ, ಸಹಾಯಕ ಪ್ರಾಧ್ಯಪಕರು, | 58,185/– |
| 2 | ಶ್ರೀ. ನಾಗಬಸವ, ಅಧೀಕ್ಷಕರು (ಲೆಕ್ಕ), | 1,93,112/– |
| 3 | ಡಾ: ಜಿ. ಗಿರೀಶ, ಸಹಾಯಕ ಪ್ರಾಧ್ಯಾಪಕರು, | 29,528/– |
| 4 | ಡಾ: ಎ. ನಾಗನಗೌಡ, ಡೀನ್ (ವಿ.ಕ್ಷೇ.) ಕೃವಿವಿ, ರಾ | 1,68,965/– |
| 5 | ಶ್ರೀ. ಜಿ.ವ್ಹಿ.ಗೌಡಗಾವೆ,(ನಿವೃತ್ತ), ಹಿರಿಯ ಕ್ಷೇತ್ರ ಸಹಾಯಕ | 99,360/– |
| 6 | ಶ್ರೀ. ಗೀತಾ ಹೆಚ್.ಪಿ., ಸಹಾಯಕ ಪ್ರಾಧ್ಯಾಪಕರು, | 26,221/– |

(ಕ್ರಮ: ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿಗಳು))

**ಐಟಂ–11** **ಶ್ರೀ ಬಾಷುಮಿಯಾ, ಕಾವಲುಗಾರ, ಎಂ.ಆರ್.ಇ., ಕೃಷಿ ಸಂಶೋಧನಾ ಕೇಂದ್ರ ಮಾಳನೂರು ಇವರಿಗೆ ವಿಶೇಷ ಪ್ರಕರಣದಡಿ ವೈದ್ಯಕೀಯ ವೆಚ್ಚದ ಮರುಪಾವತಿಯ ಬಿಲ್ಲುಗಳಿಗೆ ಅನುಮೋದನೆ ನೀಡುವ ಕುರಿತು.**

ಠರಾವು:

ವಿವರವಾದ ಚರ್ಚೆಯ ನಂತರ, ಶ್ರೀ ಬಾಷುಮಿಯಾ, ಕಾವಲುಗಾರ, ಎಂ.ಆರ್.ಇ., ಕೃಷಿ ಸಂಶೋಧನಾ ಕೇಂದ್ರ ಮಾಳನೂರು ಇವರಿಗೆ ಮಾನವೀಯತೆಯ ದೃಷ್ಟಿಯಿಂದ ರೂ. 18,598/– ಗಳ ವೈದ್ಯಕೀಯ ವೆಚ್ಚದ ಮರುಪಾವತಿಗಾಗಿ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ: ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿಗಳು))

**ಐಟಂ–12** **ಅತ್ಯುತ್ತಮ ಬೋಧಕ /ವಿಜ್ಞಾನಿಗಳು ಮತ್ತು ಸೇವಾ ಸಿಬ್ಬಂದಿ /ಸಂಶೋಧನಾ ಕೇಂದ್ರ ಹಾಗೂ ಸಂಶೋಧನಾ ಯೋಜನೆಗಳನ್ನು ಪಡೆಯುವ ವಿಜ್ಞಾನಿಗಳಿಗೆ ಪ್ರೋತ್ಸಾಹ ಧನ /ಅತ್ಯುತ್ತಮ ರೈತ ವಿಜ್ಞಾನಿ ಪ್ರಶಸ್ತಿಗಳನ್ನು**

| | |
|---|---|
| | **ಹಾಗೂ ಪ್ರೋತ್ಸಾಹ ಧನವನ್ನು ಕೃವಿವಿ ರಾಯಚೂರಿನ ಸಂಸ್ಥಾಪನಾ ದಿನಾಚರಣೆಯಂದು ಪ್ರದಾನ ಮಾಡುವುದಕ್ಕೆ ಅನುಮೋದನೆ** ಕುರಿತು<br><br>**ಠರಾವು:**<br>ಚರ್ಚೆಯ ನಂತರ, ಚರ್ಚೆಯ ನಂತರ, ಘನ ವೇದಿಕೆಯು ಸದರಿ ವಿಷಯಕ್ಕೆ ಅನುಮೋದನೆ ನೀಡಿತು ಹಾಗೂ ಅತ್ಯುತ್ತಮ ಮತ್ತು ಕನಿಷ್ಠತಮ ಕಾರ್ಯನಿರ್ವಹಿಸಿದವರನ್ನು ಪ್ರತ್ಯೇಕವಾಗಿ ಗುರುತಿಸಲು, ಹಾಗೂ ಕನಿಷ್ಠತಮ ಕಾರ್ಯನಿರ್ವಹಿಸಿದವರ ಕಾರ್ಯಕ್ಷಮತೆಯನ್ನು ಉತ್ತಮಗೊಳಿಸುವ ಸಲುವಾಗಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ಸಲುವಾಗಿ ಪರಿಣಾಮಕಾರಿ ಮಾರ್ಗಸೂಚಿಗಳನ್ನು ರಚಿಸಲು ಸಲಹೆ ನೀಡಿತು.<br>**(ಕ್ರಮ: ಕುಲಸಚಿವರು)** |
| **ಐಟಂ–13** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕ / ವಿಜ್ಞಾನಿ ಸಿಬ್ಬಂದಿಯವರು ಸಲ್ಲಿಸಿದ ರಾಜಿನಾಮೆಯನ್ನು ಅಂಗೀಕರಿಸುವ ಕುರಿತು.**<br><br>**ಠರಾವು:**<br>ವಿವರವಾದ ಚರ್ಚೆಯ ನಂತರ, ಸದರಿ ವಿಷಯಕ್ಕೆ ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡಿ ನಿಯಮಾವಳಿಗಳನುಸಾರ ಶಿಕ್ಷಕ / ವಿಜ್ಞಾನಿ (07) ಸಿಬ್ಬಂದಿಯವರು ಸಲ್ಲಿಸಿದ ರಾಜಿನಾಮೆಯನ್ನು ಅಂಗೀಕರಿಸಿ ಕೈಗೊಂಡ ಕ್ರಮವನ್ನು ಸ್ಥಿರೀಕರಿಸಿತು. **(ಕ್ರಮ: ಕುಲಸಚಿವರು)** |
| **ಐಟಂ–14** | **ಸಿ.ಎ.ಎಸ್.2006 ಯೋಜನೆಯಡಿ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕರ (ಎ.ಜಿ.ಪಿ ರೂ.6000 ರಿಂದ ರೂ.7000 ಮತ್ತು ರೂ.7000 ರಿಂದ ರೂ.8000 ಅಡಿ) ಪದೋನ್ನತಿ ಕುರಿತು**<br><br>**ಠರಾವು:**<br>ಸಿ.ಎ.ಎಸ್.–2006 ಅಡಿ ಎ.ಜಿ.ಪಿ. ರೂ. 6000 ರಿಂದ ಎ.ಜಿ.ಪಿ. ರೂ. 7000 ಕ್ಕೆ (33 ಶಿಕ್ಷಕರುಗಳಿಗೆ) ಹಾಗೂ ಎ.ಜಿ.ಪಿ. ರೂ. 7000 ರಿಂದ ಎ.ಜಿ.ಪಿ. ರೂ. 8000 ಕ್ಕೆ (11 ಶಿಕ್ಷಕರಿಗೆ) ಯಾದಿಯಲ್ಲಿ ನಮೂದಿಸಿರುವಂತೆ ಅರ್ಹ ಶಿಕ್ಷಕರುಗಳಿಗೆ ಅವರುಗಳು ಅರ್ಹತೆ ಹೊಂದಿದ ದಿನಾಂಕದಿಂದ ಅನ್ವಯವಾಗುವಂತೆ ಮುಂಬಡ್ತಿ ಆದೇಶಗಳನ್ನು ನೀಡಲು ಘನ ವೇದಿಕೆಯು ಅನುಮೋದನೆ ನೀಡಿತು.<br>**(ಕ್ರಮ: ಕುಲಸಚಿವರು)** |
| **ಐಟಂ–15** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಟಿ–4 ಎಂದು ಕಾರ್ಯನಿರ್ವಹಿಸುತ್ತಿರು ಸಿಬ್ಬಂದಿಯವರಿಗೆ ಟಿ–5 ಎಂದು ಪದೋನ್ನತಿ ಅವಕಾಶಗಳನ್ನು ನೀಡುವ ಕುರಿತು.**<br><br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಕೃವಿವಿ ಬೆಂಗಳೂರಿನ ನಿಯಮಾವಳಿ, ಪದ್ಧತಿ ಹಾಗೂ ಸ್ಕೋರ್–ಕಾರ್ಡ್‌ಗಳನ್ನು ಅಳವಡಿಸಿಕೊಂಡು ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಟಿ–4 ಎಂದು ಕಾರ್ಯನಿರ್ವಹಿಸುತ್ತಿರು ಸಿಬ್ಬಂದಿಯವರಿಗೆ ಟಿ–5 ಎಂದು ಪದೋನ್ನತಿ ನೀಡುವ ಅವಕಾಶಗಳನ್ನು ಕಲ್ಪಿಸಲು ಘನ ವೇದಿಕೆಯು ಅನುಮೋದನೆ ನೀಡಿತು. **(ಕ್ರಮ: ಕುಲಸಚಿವರು)** |
| **ಐಟಂ–16** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ (ಸ್ನಾತಕ ಮತ್ತು ಸ್ನಾತಕೋತ್ತರ) ಎಸ್.ಸಿ.ಪಿ./ ಟಿ.ಎಸ್.ಪಿ. ಯೋಜನೆಯಡಿ ಲ್ಯಾಪ್‌ಟಾಪ್ ಒದಗಿಸಲು ಅನುಮೋದನೆ ನೀಡುವ ಕುರಿತು.**<br><br>**ಠರಾವು:**<br>ಚರ್ಚೆಯ ನಂತರ, ಸದರಿ ವಿಷಯಕ್ಕೆ ಘನ ವೇದಿಕೆಯು ಅನುಮೋದನೆ ನೀಡಿ ಮುಂದಿನ ವರ್ಷದ ಪ್ರಸ್ತಾವನೆ ಸಲ್ಲಿಸುವಾಗ ಶೈಕ್ಷಣಿಕ ಚಟುವಟಿಕೆಗಳಲ್ಲಿ ಉತ್ತಮ ಸಾಧನೆಗೈದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಪ್ರೇತ್ಸಾಹ ಧನ ನೀಡುವ ವಿಷಯವನ್ನು ಸೇರಿಸಲು ಸಲಹೆ ನೀಡಿತು.<br>**(ಕ್ರಮ: ಕುಲಸಚಿವರು/ ವಿಶೇಷಾಧಿಕಾರಿ(ಎಸ್.ಸಿ./ಎಸ್.ಟಿ.ಕೋಶ)/ ನೋಡಲ್ ಅಧಿಕಾರಿ)** |

**ಐಟಂ– 17**

ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು.

ಠರಾವು:

ಚರ್ಚೆಯ ನಂತರ, ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಒಟ್ಟು ರೂ. 2126.71 ಲಕ್ಷಗಳ ಮೊತ್ತದ 20 ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಘನ ವೇದಿಕೆಯು ಅನುಮೋದನೆ ನೀಡಿತು.

(ಕ್ರಮ: ಹಣಕಾಸು ನಿಯಂತ್ರಣಾಧಿಕಾರಿಗಳು/ ಕಾರ್ಯನಿರ್ವಾಹಕ ಅಭಿಯಂತರರು)

**ಐಟಂ– 18**

ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡಿ ಸ್ಥಿರೀಕರಿಸುವ ಕುರಿತು.

ಠರಾವು:

ದೀರ್ಘ ಚರ್ಚೆಯ ನಂತರ, ನಬಾರ್ಡ್ ಹಾಗೂ ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆ ಅಡಿ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಂಡ ಕ್ರಮಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿ ಸ್ಥಿರೀಕರಿಸಿತು

(ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು)

**ಐಟಂ– 19**

ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸಲು ಅನುಮೋದನೆ ಕುರಿತು.

ಠರಾವು:

ದೀರ್ಘ ಚರ್ಚೆಯ ನಂತರ, ಈ ಕೆಳಕಂಡ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು:

Microwave Digestion System (Rs. 13.00 lakh), Gas Chromatography with Auto Injector (Rs. 35.00 lakh) and also approved and ratified for having purchased the items viz., Automatic Nitrogen Analyzer (Dry Method) Rs. 25.00 lakh, Differential Scanning Calorimeter (DSC) Rs. 30.00 lakh and Fourier Transform Near Infrared Spectroscopy (FT-NIR) Rs. 36.00 lakh.

(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು/ ಸರಕು ಖರೀದಿ ಅಧಿಕಾರಿ)

**ಐಟಂ– 20**

ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಪ್ರಯೋಗಾಲಯ ಉಪಕರಣಗಳ ಖರೀದಿ ಪ್ರಕ್ರಿಯೆ ಕೈಗೊಂಡ ಕ್ರಮಕ್ಕೆ ಅನುಮೋದನೆ ನೀಡಿ ಸ್ಥಿರೀಕರಿಸುವ ಕುರಿತು.

ಠರಾವು:

ದೀರ್ಘ ಚರ್ಚೆಯ ನಂತರ, ಈ ಕೆಳಕಂಡ ಪ್ರಯೋಗಾಲಯ ಉಪಕರಣಗಳನ್ನು ಟೆಂಡರ್‌ದಾರರು ವಿಜ್ಞಾನಿಗಳು ಪ್ರಸ್ತಾಪಿಸಿದ್ದಕ್ಕಿಂತ ಹೆಚ್ಚುವರಿಯಾಗಿ ನಮೂದಿಸಿದ ದರಗಳಿಗೆ ಖರೀದಿಸಿ ಕೈಗೊಂಡ ಕ್ರಮಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿ ಸ್ಥಿರೀಕರಿಸಿತು:

| ಕ್ರಮ ಸಂ. | ಐಟಂ ವಿವರ | ಹೆಚ್ಚುವರಿಯಾಗಿ ನಮೂದಿಸಿದ ದರ (ರೂ.) |
|---|---|---|
| | **Annexure-1** | |
| 1 | X-ray diffraction | 5,00,000.00 |
| 2 | Seed treater, dryer and automated weighing packing machine | 4,50,000.00 |
| | **Annexure-2** | |
| 3 | Radio frequency dryer with conveyor 6kv | 5,00,000.00 |
| | **Annexure-3** | |
| 4 | Pre-cleaner and accessories | 8,62,000.00 |
| 5 | Seed grader and accessories | 12,21,000.00 |
| 6 | Specific gravity separator and accessories | 8,20,500.00 |

(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು/ ಸರಕು ಖರೀದಿ ಅಧಿಕಾರಿ)

| | |
|---|---|
| ಐಟಂ– 21 | **ಹಣಕಾಸಿನ ವ್ಯವಹಾರಗಳಿಗಾಗಿ ಅಧಿಕಾರಗಳ ಪ್ರತ್ಯಾಯೋಜನೆಯಲ್ಲಿ ವಿಶ್ವವಿದ್ಯಾಲಯ ಗ್ರಂಥಾಲಯದ ಅಂಶವನ್ನು ಸೇರಿಸುವ ಕುರಿತು**<br><br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸದರಿ ವಿಷಯಕ್ಕೆ ಅನುಮೋದನೆ ನೀಡದೇ ಪುಸ್ತಕಗಳ ಖರೀದಿ ಮತ್ತು ಗ್ರಂಥಾಲಯಕ್ಕೆ ಸಂಬಂಧಪಟ್ಟ ಇತರೇ ಅಂಶಗಳಿಗಾಗಿ ಪ್ರಸ್ತುತ ಚಾಲ್ತಿಯಲ್ಲಿರುವ ಪದ್ಧತಿಯನ್ನು ಮುಂದುವರೆಸಲು ಸಲಹೆ ನೀಡಿತು. **(ಕ್ರಮ : ಕುಲಸಚಿವರು)** |
| ಐಟಂ– 22 | **ಟೆಂಡರ್ ಅನ್ನು ಅಂಗೀಕರಿಸಲು ಮಾನ್ಯ ಕುಲಪತಿಗಳವರಿಗೆ ಅಧಿಕಾರಗಳ ಪ್ರತ್ಯಾಯೋಜನೆ ನೀಡುವುದಕ್ಕಾಗಿ ಅನುಮೋದನೆ ಕುರಿತು**<br><br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ಈ ಕುರಿತು ತುರ್ತು ಸಭೆಯನ್ನು ಕರೆದು ಅಥವಾ ಸರ್ಕ್ಯುಲೇಶನ್ ಅಜೆಂಡಾದ ಮುಖಾಂತರ ಅನುಮೋದನೆ ಪಡೆಯಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸಲಹೆ ನೀಡಿತು. **(ಕ್ರಮ : ಕುಲಸಚಿವರು)** |
| ಐಟಂ– 23 | **ಭೀಮರಾಯನಗುಡಿಯ ಕೃಷಿ ಸಂಶೋಧನಾ ಕೇಂದ್ರಕ್ಕಾಗಿ ಬೊಲೆರೋ ವಾಹನವನ್ನು ಬೀಜ ಆವರ್ತ ನಿಧಿ ಅಡಿ ಖರೀದಿಸಲು ಅನುಮೋದನೆ ಕುರಿತು.**<br><br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ಭೀಮರಾಯನಗುಡಿಯ ಕೃಷಿ ಸಂಶೋಧನಾ ಕೇಂದ್ರಕ್ಕಾಗಿ ಬೊಲೆರೋ ವಾಹನವನ್ನು ಬೀಜ ಆವರ್ತ ನಿಧಿ ಅಡಿ ಖರೀದಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. **(ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು /ಸರಕು ಖರೀದಿ ಅಧಿಕಾರಿ)** |
| ಐಟಂ– 24 | **ರಾಯಚೂರಿನ ಕೃಷಿ ಮಹಾವಿದ್ಯಾಲಯ ಹಾಗೂ ಕೃಷಿ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಎರಡು ಭಾರಿ ವಾಹನಗಳನ್ನು (ಬಸ್ಸುಗಳನ್ನು) ಖರೀದಿಸಿ ಪ್ರಕ್ರಿಯೆ ಕೈಗೊಂಡ ಕ್ರಮಕ್ಕೆ ಅನುಮೋದನೆ ನೀಡಿ ಸ್ಥಿರೀಕರಿಸುವ ಕುರಿತು.**<br><br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ಕೃಷಿ ಮಹಾವಿದ್ಯಾಲಯ ರಾಯಚೂರು ಮತ್ತು ಕೃಷಿ ತಾಂತ್ರಿಕ ಮಹಾವಿದ್ಯಾಲಯ ರಾಯಚೂರಿನ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಹೊಸದಾಗಿ (ಎರಡು) ಸ್ಕೂಲ್ ಬಸ್‌ಗಳನ್ನು ರೂ. 21,68,941/– ಮತ್ತು ರೂ. 15,91,400/– ಗಳಿಗೆ (ತೆರಿಗೆ ಮತ್ತು ವಿಮೆಗಳನ್ನೊಳಗೊಂಡು) ಖರೀದಿಸಿ ಕೈಗೊಂಡ ಕ್ರಮಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿ ಸ್ಥಿರೀಕರಿಸಿತು. **(ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು /ಸರಕು ಖರೀದಿ ಅಧಿಕಾರಿ)** |
| ಐಟಂ– 25 | **ಕೆ.ವಿ.ಕೆ. ರದ್ದೇವಾಡಗಿ, ಬೀದರನಲ್ಲಿ 2016–17 ಸಾಲಿನ ವಿವಿಧ ಬೀಜೋತ್ಪಾದನಾ ಕಾರ್ಯಕ್ರಮ ಯೋಜನೆಗಳ ಅನುಷ್ಠಾನಕ್ಕೆ ಹಾಗೂ ಬೀಜ ಘಟಕ, ಕೃವಿವಿ ರಾಯಚೂರಿನಲ್ಲಿ ಪರಿಷ್ಕೃತ ಯೋಜನೆಗಳಿಗೆ ಬೇಕಾಗುವ ಹಣಕಾಸಿನ ಅನುಮೋದನೆ ಕುರಿತು.**<br><br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ಚರ್ಚೆಯ ನಂತರ, ಕೆ.ವಿ.ಕೆ. ರದ್ದೇವಾಡಗಿ, ಬೀದರನಲ್ಲಿ 2016–17 ಸಾಲಿನ ವಿವಿಧ ಬೀಜೋತ್ಪಾದನಾ ಕಾರ್ಯಕ್ರಮ ಯೋಜನೆಗಳ ಅನುಷ್ಠಾನಕ್ಕೆ ಹಾಗೂ ಬೀಜ ಘಟಕ, ಕೃವಿವಿ ರಾಯಚೂರಿನಲ್ಲಿ 2016–17 ನೇ ಸಾಲಿಗಾಗಿ ವಿವಿಧ ಬೀಜೋತ್ಪಾದನಾ ಕಾರ್ಯಕ್ರಮಗಳ ಯೋಜನೆಗಳ ಅನುಷ್ಠಾನಕ್ಕೆ ಮತ್ತು ಇದರ ಜೊತೆಗೆ ಎನ್.ಎಫ್.ಎಸ್.ಎಂ. ಮತ್ತು ಎನ್.ಎಮ್.ಒ.ಒ.ಪಿ. ಯೋಜನೆಗಳಡಿ ಹೆಚ್ಚಿನ ಬೇಳೆಕಾಳುಗಳ ಹಾಗೂ ಎಣ್ಣೆಕಾಳುಗಳ ಉತ್ಪಾದಕತೆ ಮತ್ತು ಬೀಜೋತ್ಪಾದನೆ ಕಾರ್ಯಕ್ರಮಗಳ |

| | |
|---|---|
| | ಅನುಷ್ಠಾನಕ್ಕೆ ಬೇಕಾಗುವ ಹಣಕಾಸಿನ ಅನುದಾನಕ್ಕೆ ಘನ ವೇದಿಕೆಯು ಅನುಮೋದನೆ ನೀಡಿತು. ಮುಂದುವರೆದು, ಇಂತಹ ಚಟುವಟಿಕೆಗಳನ್ನು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿಯ ಇತರೇ ಕೇಂದ್ರಗಳಿಗೆ ವಿಸ್ತರಿಸಲು ಹಾಗೂ ಸದರಿ ವಿಷಯವನ್ನು ಮಾನ್ಯ ಸದಸ್ಯರುಗಳವರ ಅವಗಾಹನೆಗೆ ತಂದು ಇಂತಹ ಚಟುವಟಿಕೆಗಳ ಸುಧಾರಣೆಗಾಗಿ ಅವರುಗಳಿಂದ ಸಲಹೆಯನ್ನು ಪಡೆಯಲು ಸಲಹೆ ನೀಡಲಾಯಿತು. ಮಾನ್ಯ ಸದಸ್ಯರಾದ ಶ್ರೀ ವೀರನಗೌಡ ಪರಸರೆಡ್ಡಿ ಅವರು ಚಿತ್ತಾಪುರ ಫಾರ್ಮ್‌ಅನ್ನು ಮೇಲ್ದರ್ಜೆಗೇರಿಸುವ ಹಾಗೂ ನಾಲವಾರದಲ್ಲಿ ಸಂಶೋಧನಾ ಕೇಂದ್ರವನ್ನು ಪ್ರಾರಂಭಿಸುವ ಬಗ್ಗೆ ಸಾಧ್ಯಾಸಾಧ್ಯತೆಗಳನ್ನು ಕಂಡುಕೊಳ್ಳಲು ಸಲಹೆ ನೀಡಿದರು. **(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು / ವಿಶೇಷಾಧಿಕಾರಿಗಳು (ಬೀಜ))** |
| ಐಟಂ–26 | **ಎಬಿಐ – ಇಕ್ರಿಸ್ಯಾಟ್ ಸಂಸ್ಥೆಗೆ ಸಲಹಾ ಶುಲ್ಕವನ್ನು ನೀಡಲು ಅನುಮೋದನೆ ನೀಡುವ ಕುರಿತು.**<br><br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ಎಬಿಐ – ಇಕ್ರಿಸ್ಯಾಟ್ ಸಂಸ್ಥೆಗೆ 2016–17 ನೇ ಸಾಲಿಗಾಗಿ ರೂ. 5.00 ಲಕ್ಷಗಳ ಸಲಹಾ ಸೇವಾ ಶುಲ್ಕವನ್ನು ಒಡಂಬಡಿಕೆಯಂತೆ ಪಾವತಿಸಿ ಕೈಗೊಂಡ ಕ್ರಮಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿ ಸ್ಥಿರೀಕರಿಸಿತು. **(ಕ್ರಮ : ಕುಲಸಚಿವರು/ ಮುಖ್ಯಸ್ಥರು– ಎಬಿಐ)** |
| | **ಹೆಚ್ಚುವರಿ ಕಾರ್ಯಸೂಚಿ ವಿಷಯಗಳು.** |
| ಐಟಂ–1 | **ಡಾ. ಬಿ.ವಿ. ಪಾಟೀಲ, ಮಾಜಿ ಕುಲಪತಿಗಳು ಹಾಗೂ ನಿವೃತ್ತ ಶಿಕ್ಷಣ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ ರಾಯಚೂರು ಇವರ ವಿರುದ್ಧ ವಿವಿಧ ಸಂಘಗಳವರು / ವ್ಯಕ್ತಿಗಳು ಮಾಡಲಾಗಿರುವ ಆರೋಪಗಳ ಕುರಿತು ವಿಚಾರಿಸಲು ಸಮಿತಿಯನ್ನು ರಚಿಸುವ ಕುರಿತು**<br><br>**ಠರಾವು:**<br>ಚರ್ಚೆಯ ನಂತರ, ಸದರಿ ವಿಷಯವನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಮುಂದಿನ ಸಭೆಯಲ್ಲಿ ಮಂಡಿಸಲು ಘನ ವೇದಿಕೆಯು ಸಲಹೆ ನೀಡುತ್ತಾ ಡಾ. ಬಿ.ವಿ. ಪಾಟೀಲ, ಮಾಜಿ ಕುಲಪತಿಗಳು ಹಾಗೂ ನಿವೃತ್ತ ಶಿಕ್ಷಣ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ ರಾಯಚೂರು ಇವರ ವಿರುದ್ಧ ವಿವಿಧ ಸಂಘಗಳವರು / ವ್ಯಕ್ತಿಗಳು ಮಾಡಲಾಗಿರುವ ಆರೋಪಗಳ ವಿವರಗಳನ್ನು ಮಾನ್ಯ ಸದಸ್ಯರುಗಳಿಗೆ ಆದಷ್ಟು ಬೇಗನೆ ಕಳುಹಿಸಲು ತಿಳಿಸಲಾಯಿತು. **(ಕ್ರಮ : ಕುಲಸಚಿವರು)** |
| ಐಟಂ–2 | **ಕೃಷಿ ಸಂಶೋಧನಾ ಕೇಂದ್ರ, ಗಂಗಾವತಿಯ ಉಗ್ರಾಣದಲ್ಲಿ ಕಂಡುಬಂದ ದಾಸ್ತಾನಿನ ವ್ಯತ್ಯಾಸ ಹಾಗೂ ಕೊರತೆ ಕುರಿತು.**<br><br>**ಠರಾವು:**<br>ಚರ್ಚೆಯ ನಂತರ, ಈ ಕುರಿತು ವಿಶೇಷಾಧಿಕಾರಿ (ಬೀಜ) ಅವರ ಅಧ್ಯಕ್ಷತೆಯಲ್ಲಿ ಸಹ–ಸಂಶೋಧನಾ ನಿರ್ದೇಶಕರು ಮತ್ತು ಫಾರ್ಮ್ ಚಟುವಟಿಕೆಗಳಲ್ಲಿ ಪರಿಣಿತರಾದ (ಮಾನ್ಯ ಸದಸ್ಯರಾದ ಡಾ. ಎಂ. ಶೇಖರಗೌಡ ಅವರ ಸಲಹೆಯಂತೆ ಡಾ. ವಿ.ಪಿ. ನಾಗಲೇಕರ್, ನಿವೃತ್ತ ಪ್ರಾಧ್ಯಾಪಕರು) ಒಬ್ಬ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸಲಹೆ ನೀಡಿತು. ಸದರಿ ವಿಷಯವು ಬಹಳ ದಿನಗಳಿಂದ ಇತ್ಯರ್ಥದಲ್ಲಿರುವುದರಿಂದ ಅದನ್ನು ಬಗೆಹರಿಸುವ ಸಲುವಾಗಿ 10 ದಿನಗಳೊಳಗಾಗಿ ಸಮಿತಿಯು ತನ್ನ ವರದಿಯನ್ನು ಸಲ್ಲಿಸಲು ತಿಳಿಸಲಾಯಿತು. ಮುಂದುವರೆದು, ಇಂತಹ ಪ್ರಮಾದ ಹಾಗೂ ಘಟನೆಗಳನ್ನು ಜರುಗದಂತೆ ಸಂಬಂಧಪಟ್ಟ ಅಧಿಕಾರಿಗಳವರು ಕಾಲಕಾಲಕ್ಕೆ ಸಂಶೋಧನಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡಲು ಸಲಹೆ ನೀಡಲಾಯಿತು. ಸದರಿ ವಿಷಯದ ಕುರಿತು ಸಂಬಂಧಪಟ್ಟವರೆಲ್ಲರಿಗೂ ತಿಳಿಸುವಂತೆ ಸುತ್ತೋಲೆಯನ್ನು ಹೊರಡಿಸಲು ಸಹ ಸಲಹೆ ನೀಡಲಾಯಿತು. **(ಕ್ರಮ : ಕುಲಸಚಿವರು)** |
| ಐಟಂ–3 | **ಕೃಷಿ ಸಂಶೋಧನಾ ಕೇಂದ್ರ, ಕಲಬುರಗಿಯಲ್ಲಿ ದ್ವಿದಳ ಧಾನ್ಯ ಅನುವಂಶಿಕ ಮತ್ತು ತಳಿ ಅಭಿವೃದ್ಧಿ ಪ್ರಯೋಗಾಲಯವನ್ನು ಮೇಲ್ದರ್ಜೆಗೇರಿಸಿ ಜಿನೋಮಿಕ್ ಪ್ರಯೋಗಾಲಯವನ್ನು ಹೈದ್ರಾಬಾದ ಕರ್ನಾಟಕ** |

| | |
|---|---|
| | **ಪ್ರದೇಶಾಭಿವೃದ್ಧಿ ಮಂಡಳಿ (HKRDB) ಕಲಬುರಗಿ ಇವರ ಹಣಕಾಸಿನ ಅನುದಾನದಿಂದ ಸ್ಥಾಪಿಸಲಾಗಿದ್ದು, ಅದಕ್ಕೆ ವಿವಿಧ ಹುದ್ದೆಗಳನ್ನು ನೀಡುವ ಕುರಿತು.**<br><br>**ಠರಾವು:**<br>ದೀರ್ಘ ಚರ್ಚೆಯ ನಂತರ, ಸದರಿ ವಿಷಯಕ್ಕೆ ಘನ ವೇದಿಕೆಯು ಅನುಮೋದನೆ ನೀಡುತ್ತಾ ಹುದ್ದೆಗಳ ಸಂಖ್ಯೆ (ಕ್ಷೇತ್ರ ಸಹಾಯಕರ ಹುದ್ದೆಗಳನ್ನು 3 ರಿಂದ 1ಕ್ಕೆ ಇಳಿಸುವುದು), ಹುದ್ದೆಗಳ ವೇತನ ಶ್ರೇಣಿಗಳನ್ನು ಗಮನಿಸಿ, ಸದರಿ ಹುದ್ದೆಗಳನ್ನು ಸೃಜಿಸಲು ಸರಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಲಹೆ ನೀಡಲಾಯಿತು.<br>**(ಕ್ರಮ : ಕುಲಸಚಿವರು/ಯೋಜನಾ ನಿರ್ದೇಶಕರು)** |
| **ಐಟಂ–4** | **ಭಾರತೀಯ ಕೃಷಿ ಅನುಸಂಧಾನ ಸಂಸ್ಥೆ–ಕೃಷಿ ಬೆಳೆಗಳ ಬೀಜೋತ್ಪಾದನಾ ಯೋಜನೆಯಡಿಯಲ್ಲಿ ಶೇಂಗಾ ಸಿಪ್ಪೆ ಸುಲಿಯುವ ಯಂತ್ರವನ್ನು ರಾಯಚೂರು ಒಕ್ಕಲುತನ ಹುಟ್ಟುವಳಿ ಮಾರಾಟ ಹಾಗೂ ಸಂಸ್ಕರಣ ಸಹಕಾರ ಸಂಘ ನಿಯಮಿತ, ರಾಯಚೂರಿನಿಂದ ಖರೀದಿಸಿ ಕೈಗೊಂಡ ಕ್ರಮಕ್ಕೆ ಅನುಮೋದನೆ ನೀಡಿ ಸ್ಥಿರೀಕರಿಸುವ ಕುರಿತು.**<br><br>**ಠರಾವು:**<br>ದೀರ್ಘ ಚರ್ಚೆಯ ನಂತರ, ಭಾರತೀಯ ಕೃಷಿ ಅನುಸಂಧಾನ ಸಂಸ್ಥೆ–ಕೃಷಿ ಬೆಳೆಗಳ ಬೀಜೋತ್ಪಾದನಾ ಯೋಜನೆಯಡಿಯಲ್ಲಿ ಶೇಂಗಾ ಸಿಪ್ಪೆ ಸುಲಿಯುವ ಯಂತ್ರವನ್ನು ರಾಯಚೂರು ಒಕ್ಕಲುತನ ಹುಟ್ಟುವಳಿ ಮಾರಾಟ ಹಾಗೂ ಸಂಸ್ಕರಣ ಸಹಕಾರ ಸಂಘ ನಿಯಮಿತ, ರಾಯಚೂರಿನಿಂದ ರೂ. 5,71,835/– ಗಳಿಗೆ ಖರೀದಿಸಿ ಕೈಗೊಂಡ ಕ್ರಮಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿ ಸ್ಥಿರೀಕರಿಸಿತು.<br>**(ಕ್ರಮ : ವಿಶೇಷಾಧಿಕಾರಿಗಳು (ಬೀಜ) / ಹಣಕಾಸು ನಿಯಂತ್ರಣಾಧಿಕಾರಿಗಳು/ ಸರಕು ಖರೀದಿ ಅಧಿಕಾರಿ)** |
| **ಐಟಂ–5** | **ಡಿಜಿಟಲ್ ಕೃಷಿ ಪ್ರಯೋಜಕತ್ವದ – ಕಾಂಪ್ರಹೇನ್ಸಿವ್ ಅಗ್ರಿ–ಬ್ಯೂಸ್‌ನೆಸ್ ಯೆಕ್ಸಟೆನ್ಷನ್ ಸರ್ವೀಸಸ್ (CABES) ಯೋಜನೆ ಅಡಿಯಲ್ಲಿ, ಸರ್ಕಾರೇತರ ಸಂಸ್ಥೆಯಾದ "ವಾಹಿನಿ ಅಭಿವೃದಿ ಸಂಸ್ಥೆ, ಹೊಸಪೇಟೆ" ಯನ್ನು ರೂ. 45,00,000/– ಬಜೆಟ್‌ನೊಂದಿಗೆ ಒಂದು ವರ್ಷದವರೆಗೆ ನೇಮಕಾತಿ ಮಾಡಲು ಅನುಮೋದನೆ ನೀಡುವ ಕುರಿತು.**<br><br>**ಠರಾವು:**<br>ದೀರ್ಘ ಚರ್ಚೆಯ ನಂತರ, ಸದರಿ ವಿಷಯಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>**(ಕ್ರಮ : ಸಂಶೋಧನಾ ನಿರ್ದೇಶಕರು / ಡಾ. ಎ. ಪ್ರಭುರಾಜ / ಹಣಕಾಸು ನಿಯಂತ್ರಣಾಧಿಕಾರಿಗಳು)** |
| **ಐಟಂ–6** | **ಡಾ. ಯು.ಕೆ. ಶಾನವಾಡ, ವಿಜ್ಞಾನಿ / ಸಹಾಯಕ ಪ್ರಾಧ್ಯಾಪಕರು, ಮುಖ್ಯ ಕೃಷಿ ಸಂಶೋಧನಾ ಕೇಂದ್ರ, ರಾಯಚೂರು ಇವರು ಸಲ್ಲಿಸಿದ ರಾಜಿನಾಮೆಯನ್ನು ಅಂಗೀಕರಿಸುವ ಕುರಿತು.**<br><br>**ಠರಾವು:**<br>ದೀರ್ಘ ಚರ್ಚೆಯ ನಂತರ, ಡಾ. ಯು.ಕೆ. ಶಾನವಾಡ, ವಿಜ್ಞಾನಿ / ಸಹಾಯಕ ಪ್ರಾಧ್ಯಾಪಕರು, ಮುಖ್ಯ ಕೃಷಿ ಸಂಶೋಧನಾ ಕೇಂದ್ರ, ರಾಯಚೂರು ಇವರು ಸಲ್ಲಿಸಿದ ರಾಜಿನಾಮೆಯನ್ನು ವಿಶ್ವವಿದ್ಯಾಲಯವು ಅಂಗೀಕರಿಸಿ ಕೈಗೊಂಡ ಕ್ರಮಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿ ಸ್ಥಿರೀಕರಿಸಿತು<br>**(ಕ್ರಮ : ಕುಲಸಚಿವರು)** |
| | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೇ ವಿಷಯಗಳು** |
| | ➢ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಏಳನೇಯ ವಾರ್ಷಿಕ ಘಟಿಕೋತ್ಸವದಲ್ಲಿ ವಿಶಿಷ್ಠ ಸಾಧನೆಗೈ 2–3 ವಿಜ್ಞಾನಿಗಳಿಗೆ ಗೌರವ ಡಾಕ್ಟರೇಟ್ ಪದವಿಗಳನ್ನು ಪ್ರದಾನ ಮಾಡಲು ನಿರ್ಧರಿಸಲಾಯಿತು. ಈ |

| | |
|---|---|
| | ಸಂಬಂಧವಾಗಿ ಗಣ್ಯ ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಮಾರ್ಗಸೂಚಿಗಳನ್ನು ಪಾಲಿಸಲು ಸಲಹೆ ನೀಡಲಾಯಿತು. **(ಕ್ರಮ : ಕುಲಸಚಿವರು)**<br><br>➢ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳು ವಿವಿಧ ಉಪಸಮಿತಿಗಳನ್ನು ರಚಿಸುವುದರ ಬಗ್ಗೆ ಚರ್ಚಿಸಿದರು ಹಾಗೂ ದೀರ್ಘ ಚರ್ಚೆಯ ನಂತರ ವ್ಯವಸ್ಥಾಪನಾ ಮಂಡಳಿಯ ವಿವಿಧ ಉಪಸಮಿತಿಗಳನ್ನು ರಚಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. **(ಕ್ರಮ : ಕುಲಸಚಿವರು)** |

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| ಸಹಿ /– 13–4–2017 | ಸಹಿ /– 13–4–2017 |
| **(ಪಿ.ಎಂ. ಸಾಲಿಮಠ)** | **(ಡಿ.ಎಂ. ಚಂದರಗಿ)** |
| ಕುಲಪತಿಗಳು ಹಾಗೂ ಅಧ್ಯಕ್ಷರು | ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ |
| ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಡಿ.ಎಂ. ಚಂದರಗಿ)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.